ಸಾಹಿತ್ಯ ಉತ್ಸವಗಳ ಸುತ್ತ...

ಸ್ವಾತಿ ಎಸ್.ಕೆ.

# ಪುಸ್ತಕೋದ್ಯಮದ ವೇದಿಕೆ

'ಸಾಹಿತ್ಯ ಸಮ್ಮೇಳನವೇ? ಅದೊಂದು ಜಾತ್ರೆ' ಎಂಬ ಟೀಕೆ ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯ. ಜಾತ್ರೆ ಎಂಬ ಪರಿಕಲ್ಪನೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ಅದನ್ನು ಈಗಿನ ಸಾಹಿತ್ಯ ಸಮ್ಮೇಳನಕ್ಕೆ ಅನ್ವಯಿಸಿ ಅರ್ಥ ಮಾಡಿಕೊಂಡರೆ ಈ ಕಾಲದ ಸಾಹಿತ್ಯ ಸಮ್ಮೇಳನ, ಲಿಟರೇಚರ್ ಫೆಸ್ಟಿವಲ್ ಅರ್ಥಾತ್ ಸಾಹಿತ್ಯದ ಹಬ್ಬಗಳೂ ಅರ್ಥವಾಗುತ್ತವೆ. ಆಗ 'ಜಾತ್ರೆ' ಎಂಬ ಪದ ಒಂದು ಮಿತಿಯಾಗಿ ಕಾಣದೆ ಒಂದು ಸಾಧ್ಯತೆಯಾಗಿ ಅನಾವರಣಗೊಳ್ಳುತ್ತದೆ.

ಜಾತ್ರೆಯ ಪರಿಕಲ್ಪನೆ ನಮ್ಮ ದೇವಸ್ಥಾನಗಳಷ್ಟೇ ಹಳೆಯದು. ಇದು ಹುಟ್ಟಿದ ಕಾಲದಿಂದಲೂ ಜಾತ್ರೆಯಲ್ಲಿ ತೇರು ಮತ್ತು ಅದನ್ನೆಳೆಯುವ ಒಂದು ಸಂಭ್ರಮವಿತ್ತು. ಉತ್ಸವ ಮೂರ್ತಿಯನ್ನು ಕುಳ್ಳಿರಿಸಿದ ತೇರನ್ನು ಎಳೆಯುವುದಷ್ಟೇ ಆಗಿದ್ದರೆ ಅದೊಂದು ಸೀಮಿತ ಆಚರಣೆಯಾಗಿ ಉಳಿದುಬಿಡುತ್ತಿತ್ತು. ಆದರೆ ಅದು ಸತತವಾಗಿ ವಿಕಾಸಹೊಂದುತ್ತಾ ತನ್ನ ಕಾಲಕ್ಕೆ ಅನ್ವಯಗೊಳ್ಳುತ್ತಾ ಬಂದಿರುವುದರಿಂದ ಜಾತ್ರೆ ಇಂದಿಗೂ ಉಳಿದಿದೆ. ಅಲ್ಲಿರುವ ಅಂಗಡಿ, ಬೆಂಡು, ಬತ್ತಾಸುಗಳು, ಮಕ್ಕಳು ಮತ್ತು ದೊಡ್ಡವರು ಆಡುವುದಕ್ಕೆ ಸಂಭ್ರಮಿಸುವುದಕ್ಕೆ ಇರುವ ಅಸಂಖ್ಯ ಅವಕಾಶಗಳೆಲ್ಲವೂ ಸೇರಿ ಜಾತ್ರೆಯಾಗುತ್ತದೆ. ಉತ್ಸವ ಮೂರ್ತಿಯ ತೇರು ಒಂದರ್ಥದಲ್ಲಿ ಬರೇ ಆನುಷಂಗಿಕ.

ಕನ್ನಡ ಸಾಹಿತ್ಯ ಪರಿಷತ್ತು ಆರಂಭದಲ್ಲಿ ಸಮ್ಮೇಳನಗಳನ್ನು ನಡೆಸುತ್ತಿದ್ದ ಕಾಲದಲ್ಲಿ ಅದು ಸಾಹಿತ್ಯಕ್ಕೆ ಸೀಮಿತವಾಗಿತ್ತು. ಅದರಲ್ಲಿ ಭಾಗವಹಿಸುತ್ತಿದ್ದ ಜನರ ಸಂಖ್ಯೆಯೂ ಅಷ್ಟೇ ಇತ್ತು. ಒಂದು ಪದವಿ ಕಾಲೇಜು ನಡೆಸುವ ತಥಾಕಥಿತ 'ರಾಷ್ಟ್ರೀಯ ವಿಚಾರ ಸಂಕಿರಣ'ವೊಂದರಲ್ಲಿ ಭಾಗವಹಿಸುವಷ್ಟೇ ಜನರು ಅಂದು ಭಾಗವಹಿಸುತ್ತಿದ್ದರು. ಆದರೆ ಅದಕ್ಕಿಂತ ಹೆಚ್ಚು ಗಂಭೀರವಾಗಿ ಸಾಹಿತ್ಯದ ವಿಚಾರಗಳು ಚರ್ಚೆಯಾಗುತ್ತಿದ್ದವು. ಸಾಹಿತ್ಯ ಪರಿಷತ್ತಿಗೆ ವಯಸ್ಸಾಗುತ್ತಾ ಅದರ ವ್ಯಾಪ್ತಿ ಹೆಚ್ಚುತ್ತಾ ಸಾಹಿತ್ಯ ಎಂಬುದೂ ವಿವಿಧ ದಿಕ್ಕಿಗೆ ವಿಕಸನಗೊಳ್ಳುತ್ತಾ ಸಾಗಿದಾಗಲೂ ಸಮ್ಮೇಳನ ಹಿಂದಿನ ಹಾಗೆಯೇ ಇರಬೇಕಿತ್ತು ಎಂದು ವಾದಿಸುವುದರಲ್ಲಿ ಅರ್ಥವಿಲ್ಲ. ಸಾಹಿತ್ಯ ಸಮ್ಮೇಳನ ಈಗ ಪಡೆದುಕೊಂಡಿರುವ ಜಾತ್ರೆಯ ಸ್ವರೂಪವು ಅದರ ಸಹಜ ವಿಕಾಸದ ಫಲಿತಾಂಶ.

ಪಠ್ಯ ಪುಸ್ತಕಗಳನ್ನು ಹೊರತು ಪಡಿಸಿದರೆ ಬೇರೆ ಪುಸ್ತಕದ ಅಂಗಡಿಗಳೇ ಇಲ್ಲದ ಊರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗಲೂ ಕೋಟ್ಯಂತರ ರೂಪಾಯಿಗಳ ಕನ್ನಡ ಪುಸ್ತಕ